ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪ. 2013–14ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ. ಹಾಗೆಯೇ 2012–13ನೇ ಸಾಲಿನ ಪೂರಕ ಅಂದಾಜುಗಳ (ಮೂರನೇ ಹಾಗೂ ಅಂತಿಮ ಕಂತು) ಮೇಲೆ ಚರ್ಚೆ.

ಶ್ರೀ. ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ವರದಿಯನ್ನೊಪ್ಪಿಸುವುದು ಇದೆ. ಅದನ್ನು place ಮಾಡುತ್ತೇನೆ.

ಅಧ್ಯಕ್ಷರು : ಮಾಡಿ.

3. ವರದಿಯನ್ನೊಪ್ಪಿಸುವುದು

ಶ್ರೀ. ಟಿ.ಬಿ.ಜಯಚಂದ್ರ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ) : ಮಾನ್ಯ ಅಧ್ಯಕ್ಷರೆ, 2011–12ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಆರ್ಥಿಕ ಇಲಾಖೆಗೆ ಸಂಬಂಧಿಸಿದ ಹತ್ತೊಂಭತ್ತನೇ ವರದಿಯನ್ನು ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಪರವಾಗಿ ಸದನದ ಪರವಾಗಿ ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು

ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪ. ಎಲ್ಲಾ ಮಾನ್ಯ ಸದಸ್ಯರುಗಳು ಸೀಮಿತವಾಗಿ ಮಾತನಾಡಿದರೆ ಎಲ್ಲರಿಗೂ ಅವಕಾಶವನ್ನು ಕೊಡಬಹುದು. ಶ್ರೀ ಶ್ರೀಕಾಂತ ಕುಲಕರ್ಣಿಯವರು ತಾವು ಮಾತನಾಡಿ.

4. ವಿತ್ತೀಯ ಕಾರ್ಯಕಲಾಪಗಳು

ಶ್ರೀ ಶ್ರೀಕಾಂತ್ ಕುಲಕರ್ಣಿ (ಜಮಖಂಡಿ) : ಮಾನ್ಯ ಸಭಾಧ್ಯಕ್ಷರೆ, ನಮ್ಮ ಮುಖ್ಯಮಂತ್ರಿಗಳು 8ನೇ ಫೆಬ್ರವರಿ, 2013 ರಂದು ಮಂಡಿಸಿದಂತಹ 2013–14ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ ಮಾಡುವುದಕ್ಕೆ ನನಗೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ನಾನು ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯವನ್ನು ಅಭಿವೃದ್ಧಿಯತ್ತ ತೆಗೆದುಕೊಂಡು ಹೋಗುವ ಸಲುವಾಗಿ ನಮ್ಮ ಮುಖ್ಯಮಂತ್ರಿಗಳು ಮತ್ತು ನಮ್ಮ ಸರ್ಕಾರ ವಿಶೇಷವಾದಂತಹ ಒಂದು ಸಾಹಸವನ್ನು ಮಾಡಿದ್ದಾರೆಂದು ಹೇಳಿದರೆ ತಪ್ಪಾಗುವುದಿಲ್ಲ. ಈ ವರ್ಷ ಮಂಡಿಸಿರುವಂತಹ ಬಜೆಟ್ ಅದರಲ್ಲೂ ವಿಶೇಷವಾಗಿ ರೈತರ ಬಗ್ಗೆ ನೀರಾವರಿಯ ಬಗ್ಗೆ ಗ್ರಾಮಾಂತರ ಕಷ್ಟ–ಸುಖಗಳ ಬಗ್ಗೆ ಚಿಂತನೆಯನ್ನು ಮಾಡಿ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಗ್ರಾಮಾಂತರ ಭಾಗಗಳ ಅಭಿವೃದ್ಧಿಗೆ ಅವಕಾಶವನ್ನು ಕೊಟ್ಟಿರುವಂತಹ ಈ ಬಜೆಟ್ ಒಂದು

ಜನಪರ ಬಜೆಟ್ ಎಂದು ನಾನು ಸ್ವಾಗತ ಮಾಡುವುದಕ್ಕೆ ಬಯಸುತ್ತೇನೆ. ಬಹುಶಃ ಈ ಸದನದಲ್ಲಿ ಅನೇಕ ಬಾರಿ ಚರ್ಚೆಯಾದಾಗ ಅನೇಕ ಹಿರಿಯರು ಮತ್ತು ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಇಂತಹ ಒಳ್ಳೆಯ ಬಜೆಟ್‌ಗೆ ಜನಪರ ಬಜೆಟ್‌ಗೆ ಇದು ಚುನಾವಣಾ ಬಜೆಟ್ ಎಂದು ಟೀಕೆ ಮಾಡಿದರು. ಬಹುಶಃ ಅವರು ಇದನ್ನು ಚುನಾವಣಾ ಬಜೆಟ್ ಎಂದರೆ ಇದು ಜನಪ್ರಿಯ ಬಜೆಟ್ ಎಂದೇ ಅರ್ಥ. ಹೀಗಾಗಿ ಸಾಮಾನ್ಯ ರೈತರ ಬಡವರ ಏಳಿಗೆಯ ಹಿನ್ನಲೆಯಲ್ಲಿ ಸಾಕಷ್ಟು ಯೋಜನೆಗಳನ್ನು ಜಾರಿಗೆ ತರುವಂತಹ ಒಂದು ಪ್ರಯತ್ನವು ಇಲ್ಲಿ ಆಗಿದೆ ಎಂದು ನಾನು ಬಹಳ ಅಭಿಮಾನದಿಂದ ಹೇಳುವುದಕ್ಕೆ ಬಯಸುತ್ತೇನೆ. ಈ ವರ್ಷ ಕೃಷಿಯ ಬಗ್ಗೆ 22,310 ಕೋಟಿ ರೂ.ಗಳ ಒಂದು ವಿಶೇಷವಾದಂತಹ ಬಜೆಟ್ ಅನ್ನು ಮಂಡಿಸಿದ್ದಾರೆ. ಕಳೆದ ಎರಡು ವರ್ಷಗಳಿಂದ ಪ್ರಕೃತಿಯ ಒಂದು ವಿಕೋಪ ನಮ್ಮ ಕರ್ನಾಟಕದ ಮೇಲೆ ಆಗಿದೆ. ಕಳೆದ ಎರಡು ವರ್ಷಗಳಿಂದ ಮಳೆಯಾಗಲಿಲ್ಲ. ಬಹುಶಃ ಅನೇಕ ವರ್ಷಗಳಿಂದ ಕೆಲವು ಭಾಗದಲ್ಲಿ ಉತ್ತರ ಕರ್ನಾಟಕ, ಇತ್ಯಾದಿ ಭಾಗಗಳಲ್ಲಿ ಮಳೆಯು ಆಗಾಗ್ಗೆ ಕೈ ಕೊಡುವುದು ಸ್ವಾಭಾವಿಕ. ಒಂದು ವರ್ಷ ಮುಂಗಾರು ಮಳೆಯಾದರೆ, ಹಿಂಗಾರು ಮಳೆ ಬರುತ್ತಿರಲಿಲ್ಲ; ಹಿಂಗಾರು ಮಳೆಯಾದರೆ ಮುಂಗಾರು ಮಳೆಯಾಗುತ್ತಿರಲಿಲ್ಲ. ಆದರೆ ಮುಂಗಾರು ಮತ್ತು ಹಿಂಗಾರು ಮಳೆ ಕಳೆದೆರಡು ವರ್ಷಗಳಿಂದ ಆಗದೆ ಇರುವುದು ಬಹುಶಃ ಒಂದು ಐತಿಹಾಸಿಕವಾದ ದಾಖಲೆಯಾಗಿದೆ ಎಂದು ನನಗನಿಸುತ್ತದೆ. ನಾವ್ಯಾರೂ ಕಂಡು ಕೇಳದಂತಹ ಭಯಾನಕವಾದಂತಹ ಪರಿಸ್ಥಿತಿ ಈ ಭಾಗದಲ್ಲಿದೆ. ಬಹಳ ದೊಡ್ಡಸಂಖ್ಯೆಯಲ್ಲಿ ಸುಮಾರು 157 ತಾಲ್ಲೂಕುಗಳು ಬರಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿದ್ದಾರೆ. ಕಳೆದ ವರ್ಷ ಕುಡಿಯುವ ನೀರು, ದನಕರುಗಳ ಸಾಕಾಣಿಕೆ ಹಿನ್ನಲೆಯಲ್ಲಿ ಗೋಶಾಲೆಗಳ ಸ್ಥಾಪನೆ ಮತ್ತು ಬೇರೆ ಬೇರೆ ಗ್ರಾಮಾಂತರ ಭಾಗದಲ್ಲಿ ಕೃಷಿಕರಿಗೆ ಕೈ ಕೆಲಸ ಕೊಡುವುದಕ್ಕಾಗಿ ಕಾರ್ಯಕ್ರಮಗಳನ್ನು ಸರ್ಕಾರವು ಜಾರಿಗೆ ತಂದಿರುವುದಕ್ಕೆ ನಾವು ಅಭಿನಂದಿಸಬೇಕಾಗುತ್ತದೆ. ಕೇಂದ್ರ ಸರ್ಕಾರವು ಪ್ರಕೃತಿಯ ವಿಕೋಪವಾದಾಗ ಯಾವುದೇ ರಾಜ್ಯಕ್ಕೆ ತೊಂದರೆಯಾದಾಗ ಆ ರಾಜ್ಯದ ಕಷ್ಟ ಸುಖಗಳಿಗೆ ಸ್ಪಂದನೆ ಮಾಡುವುದು ಕೇಂದ್ರದ ಕರ್ತವ್ಯವಾಗಿದೆ. ಕಳೆದ ಬಾರಿ ಮುಂಗಾರಿನಲ್ಲಿ ಮಳೆಯಾಗದೆ ಸಂಪೂರ್ಣವಾಗಿ ರೈತರ ಬೆಳೆ ನಷ್ಟವಾಗಿರುವುದಕ್ಕೆ ಸುಮಾರು 2006 ಕೋಟಿ ರೂಪಾಯಿಗಳನ್ನು ಪರಿಹಾರ ಕೊಡಬೇಕೆಂದು ಕೇಳಿದಾಗ ಕೇಂದ್ರ ಸರ್ಕಾರವು ಕೇವಲ 70 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಹಿಂಗಾರಿಗೆ ಆ ಸಂದರ್ಭದಲ್ಲಿ ಮಳೆಯು ಸಂಪೂರ್ಣವಾಗಿ ಕೈಕೊಟ್ಟು ಕೆಲವು ಭಾಗದಲ್ಲಿ ಮಾತ್ರ

ಅಲ್ಪಸ್ವಲ್ಪ ಮಳೆ ಬಿತ್ತನೆಗೆ ಮಾತ್ರ ಕಾರಣವಾಗುವಷ್ಟು ಮಳೆಯಾದ್ದರಿಂದ ಸುಮಾರು 3609 ಕೋಟಿ ರೂಪಾಯಿಗಳ ಹಾನಿಯಾಗಿದೆ. ಇದಕ್ಕೆ ಕೇಂದ್ರದಿಂದ ಪರಿಹಾರ ಬೇಕೆಂದು ಕೇಳಿದಾಗ ಕೇಂದ್ರ ಸರ್ಕಾರವು ಈ ರಾಜ್ಯಕ್ಕೆ ಕೇವಲ 282 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಇಷ್ಟೆಲ್ಲಾ ಆರ್ಥಿಕವಾಗಿ ಅನಾನುಕೂಲತೆಯು ಇದ್ದಾಗ ದೊಡ್ಡ ಪ್ರಮಾಣದಲ್ಲಿ ಈ ಒಂದು ಬರವನ್ನು ಎದುರಿಸುವಂತಹ ಪ್ರಯತ್ನ ನಮ್ಮ ಸರ್ಕಾರವು ಮಾಡಿದೆ. ಬಹುಶಃ ಬಿತ್ತನೆ ಬೀಜ ಇರಬಹುದು, ರಸಗೊಬ್ಬರ ಇರಬಹುದು, Drip Irrigation ಇರಬಹುದು.

ಕೃಷಿಕರಿಗೆ ಬೇಕಾಗುವ ಯಂತ್ರೋಪಕರಣಗಳ ವ್ಯವಸ್ಥೆ ಮಾಡುವ ಹಿನ್ನಲೆಯಲ್ಲಿ ಕಳೆದ ವರ್ಷವೂ ಕೂಡ ಸರ್ಕಾರ ಸಾಕಷ್ಟು ಸಹಾಯ ಮಾಡಿದೆ. ಈ ವರ್ಷವೂ ಕೂಡ ಕೃಷಿ ಬಜೆಟ್‌ನಲ್ಲಿ ವಿಶೇಷವಾಗಿ ಸಾವಯವ ಕೃಷಿಗೆ ಒತ್ತು ಕೊಟ್ಟು ಈ ರಾಸಾಯನಿಕ ವಸ್ತುಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧ ಮಾಡಬೇಕು, ಸಂಪೂರ್ಣ ಕಡಿಮೆ ಮಾಡಬೇಕು . ಮತ್ತು ಅತ್ಯಂತ ಫಲವತ್ತಾದ ಕರ್ನಾಟಕದ ಭೂಮಿಯಲ್ಲಿ ಮನುಷ್ಯನ ಆರೋಗ್ಯಕ್ಕೆ ಯೋಗ್ಯವಾದ ಬೆಳೆಯನ್ನು ಬೆಳೆಯಬೇಕು ಎನ್ನುವ ಹಿನ್ನಲೆಯಲ್ಲಿ ಈ ಸಾವಯವ ಕೃಷಿ ಗೋವು ಆಧಾರಿತ ಕೃಷಿ ನಮ್ಮ ದೇಶದ ಪರಂಪರೆ, ಅದನ್ನು ಮತ್ತೊಮ್ಮೆ ಉಳಿಸಿಕೊಂಡು ಬೆಳೆಸುವಂಥ ಒಂದು ಪ್ರಯತ್ನ ಸರ್ಕಾರ ಮಾಡಿದೆ. ಹಾಗಾಗಿ ಸರ್ಕಾರವನ್ನು ಬಹಳ ಹೃತ್ಪೂರ್ವಕವಾಗಿ ಶ್ಲಾಘನೆ ಮಾಡಬಯಸುತ್ತೇನೆ. ಇವತ್ತು ರೈತರು ಅನೇಕ ಬಾರಿ ಮಳೆಯಾಗಿ ಬೆಳೆ ಬಂದು ಅದಕ್ಕೆ ವಿಶೇಷವಾಗಿ ಅದಕ್ಕೆ ರೋಗ ಬಂದಾಗ ಅಕಸ್ಮಾತ್ ಬೆಳೆ ಬೆಳೆದು ಬಂದಾಗ ಸರಿಯಾದಂಥ ಬೆಲೆ ಸಿಗದೆ ಮಾರುಕಟ್ಟೆಯಲ್ಲಿ ಏರುಪೇರಾಗಿ ರೈತರಿಗೆ ಅವರ ಸಾಲದಿಂದ ಭಾರವಾದಾಗ ಆ ರೈತರ ರಕ್ಷಣೆಗೆ ಸರ್ಕಾರ ಬರಬೇಕಾದುದು ಸ್ವಾಭಾವಿಕ. ಕಳೆದ ವರ್ಷ ನಮ್ಮ ಸರ್ಕಾರ ಯಾವ ರೈತರು ಸಾಲ ಮಾಡಿ ತೊಂದರೆಯಲ್ಲಿದ್ದಾರೋ ಅಂಥ ರೈತರಿಗೆಲ್ಲಾ ಅನುಕೂಲವಾಗಲಿ ಎಂದು ಹೇಳಿ ಯಾವುದೇ ದೊಡ್ಡ ರೈತ, ಸಣ್ಣ ರೈತ ಎಂಬ ಗುಂಪು, ಜಾತಿ ಮತ್ತೊಂದನ್ನು ಯೋಚನೆ ಮಾಡದೆ ಪ್ರತಿಯೊಬ್ಬ ರೈತನಿಗೆ ಅವನು ಪಡೆದಂಥ ಸಹಕಾರಿ ಸಾಲದ ಮೇಲೆ 25,000–00 ರೂಪಾಯಿಗಳನ್ನು ಮನ್ನಾ ಮಾಡಿ ಹೊಸ ದಾಖಲೆಯನ್ನು ಸೃಷ್ಟಿ ಮಾಡಿದ್ದಾರೆ. ಸುಮಾರು ಮೂರು ಸಾವಿರದ ಆರುನೂರು ಕೋಟಿ ರೂಪಾಯಿಗಳನ್ನು ಸರ್ಕಾರ ಮಂಜೂರು ಮಾಡಿ ಹಂತ ಹಂತವಾಗಿ ಸಹಕಾರಿ ಸಂಘಗಳಿಗೆ ಹಣ ಬಿಡುಗಡೆ ಮಾಡುತ್ತಿದೆ. ಆದ್ದರಿಂದ ಸ್ವಲ್ಪ ಮಟ್ಟಿಗೆ ನೆಮ್ಮದಿ ರೈತರಿಗೆ ಬಂದಿದೆ ಎಂದು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒಂದು

ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಯಾವ ದೊಡ್ಡ ಸಂಖ್ಯೆಯಲ್ಲಿ ರೈತರು ರಾಜ್ಯದಲ್ಲಿ ಈ ದೇಶದಲ್ಲಿದ್ದಾರೋ ಅದರ ನಂತರ ದೊಡ್ಡ ಸಂಖ್ಯೆಯಲ್ಲಿರುವವರು ನೇಕಾರರು. ರೈತರು ಸಾರ್ವಜನಿಕರಿಗೆ ಆಹಾರ ಕೊಟ್ಟು ಕಾಪಾಡಿದರೆ ನೇಕಾರರು ಬಟ್ಟೆಯನ್ನು ನೇಯ್ದು ಸಾರ್ವಜನಿಕರ ಮರ್ಯಾದೆಯನ್ನು ಕಾಪಾಡುತ್ತಾರೆ. ಹೀಗಾಗಿ ರೈತರಿಗೆ 25000–00 ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದಂಥ ಸರ್ಕಾರ ಹಿಂದೆ ಮುಂದೆ ನೋಡದೆ ನೇಕಾರರಿಗೂ ಕೂಡ ಸಾಲ ಮನ್ನಾ ಮಾಡುವಂಥ ಯೋಜನೆಯನ್ನು ಈ ಸಂದರ್ಭದಲ್ಲಿ ಜಾರಿಗೆ ತರಬೇಕೆಂದು ಒತ್ತಾಯಿಸುತ್ತೇನೆ. ಬಹುಶಃ ಯಾವ ರೈತರಿಗೆ ಗ್ರಾಮಾಂತರ ಭಾಗದಲ್ಲಿ ಕೆಲಸ ಮಾಡಿ ಇವತ್ತು ಕೃಷಿ ವಸ್ತುಗಳಿಗೆ ಬೆಳೆಗಳನ್ನು ತಂದು ಮಾರಲಿಕ್ಕೆ ವಿಶೇಷವಾದ ಮಾರುಕಟ್ಟೆಗಳ ಅಭಾವವಿದೆ, ಅಂತಹ ರೈತರಿಗೆ ಆ ಮಾರುಕಟ್ಟೆ ವ್ಯವಸ್ಥೆ ಮಾಡಿದ ಹಿನ್ನಲೆಯಲ್ಲಿ ಹೊಸ ಹೊಸ ಯೋಜನೆಗಳನ್ನು ಸರ್ಕಾರ ಈ ಒಂದು ಬಜೆಟ್‌ನಲ್ಲಿ ಘೋಷಣೆ ಮಾಡಿ ರೈತ ಬೆಳೆದಂಥ ಬೆಳೆಗೆ ಸರಿಯಾದಂಥ ಬೆಂಬಲದ ಬೆಲೆ ಸಿಗಬೇಕೆನ್ನುವ ಹಿನ್ನಲೆಯಲ್ಲಿ ಸಾಕಷ್ಟು ಯೋಜನೆಗಳನ್ನು ಮಾಡಿ ಅದನ್ನು ಜಾರಿಗೆ ತರುವಲ್ಲಿ ಸಂಪೂರ್ಣ ಯಶಸ್ವಿಯಾಗಲಿ ಎಂದು ಈ ಸಂದರ್ಭದಲ್ಲಿ ಹಾರೈಸುತ್ತೇನೆ. ನೀರಾವರಿ ಹಿನ್ನೆಲೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಈ ಹಿಂದಿನ ಸರ್ಕಾರಗಳು ನೀರಾವರಿಗೆ ಆದ್ಯತೆ ಕೊಟ್ಟಿದ್ದರೆ ಬಹುಶಃ ಒಂದು ವರ್ಷ ಎರಡು ವರ್ಷ ಮಳೆಯಾಗದಿದ್ದರೆ ಭಯಭೀತಿ ಪಡುವಂಥ ಅವಶ್ಯಕತೆ ಇರುತ್ತಿರಲಿಲ್ಲ. ಇವತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮುಂದಿನ ಹತ್ತು ವರ್ಷಗಳವರೆಗೆ ಇದನ್ನು ನೀರಾವರಿ ದಶಕ ಎಂದು ಘೋಷಣೆ ಮಾಡಿ ಬಹಳ ದೊಡ್ಡ ಪ್ರಮಾಣದಲ್ಲಿ ನೀರಾವರಿಗೆ ಹಣವನ್ನು ಒದಗಿಸುವಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ನಮ್ಮ ಭಾಗದ ಅಖಂಡ ಬಿಜಾಪುರದಲ್ಲಿ ಹರಿಯುತ್ತಿರುವ ಐದು ನದಿಗಳ ನೀರನ್ನು ಆ ರೈತನ ಒಣ ಪ್ರದೇಶದ ಜಮೀನಿಗೆ ಕೊಡಬೇಕೆಂಬ ಹಿನ್ನೆಲೆಯಲ್ಲಿ ಗುತ್ತಿ ಬಸವಣ್ಣ, ಚಿಮ್ಮಲಗಿ, ಮುಲ್ಲಾಬಾದ್, ಮುಳವಾಡ ಏತ ನೀರಾವರಿ ಮೂರು–ನಾಲ್ಕನೇ ಹಂತಗಳಿರಬಹುದು, ಅವೆಲ್ಲಾ ಯೋಜನೆಗಳಿಗೆ ಬೇಕಾಗುವಷ್ಟು ಧನಸಹಾಯವನ್ನು ಮೀಸಲಿಟ್ಟು ಅಗತ್ಯವಾದಂಥ ಹಣವನ್ನು ಬಿಡುಗಡೆ ಮಾಡಿ, ಅವುಗಳನ್ನು ಜಾರಿಗೊಳಿಸುವಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಇವತ್ತು ಬಹಳ ದೊಡ್ಡ ಬರಗಾಲ ಬಂದು, ಒಂದು ಅಡಿಯವರೆಗೆ ಬೋರ್ ಹಾಕಿದರೂ ಕೂಡ ನೀರು ಬರುತ್ತಿಲ್ಲ. ಅಂಥ ಪ್ರದೇಶದಲ್ಲಿ ನೀರಾವರಿಯಾಗಿಬಿಟ್ಟರೆ ಆ ನೀರಿನ ಅಂತರ್ಜಲ ಮಟ್ಟ ಮೇಲಕ್ಕೆ ಬಂದು, ಬಹಳ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕರಿಗೆ ಉಪಯೋಗವಾಗುತ್ತದೆ. ಈ

ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಗಳಿಗೆ ಸನ್ಮಾನ್ಯ ಬೃಹತ್ ನೀರಾವರಿ ಮಂತ್ರಿಗಳಿಗೆ ಒತ್ತಾಯ ಮಾಡುತ್ತೇನೆ. ಕಳೆದ ವರ್ಷ ಬಜೆಟ್‌ನಲ್ಲಿ ಹಿಂದಿನ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದರು. ಸಾವಳಗಿ ಮತ್ತು ಬಬಲೇಶ್ವರ ಬರಪೀಡಿತವಾದಂಥ ಪ್ರದೇಶ. ಕೊಯ್ನಾ ಡ್ಯಾಂನಿಂದ ಬರಬೇಕಾದ ನೀರಿನಿಂದ ವಂಚಿತವಾದಂಥ ಆ ಪ್ರದೇಶಗಳಿಗೆ ನೀರಾವರಿ ಆಗಬೇಕೆನ್ನುವ ಒತ್ತಡ ಬಹಳ ವರ್ಷಗಳಿಂದ ಇದೆ. ಕಳೆದ ವರ್ಷ ಘೋಷಣೆ ಮಾಡಿರುವಂತೆ ಸಾವಳಗಿ ಬಬಲೇಶ್ವರ ಏತ ನೀರಾವರಿ 3.8 ಟಿಎಂಸಿ ನೀರನ್ನು ಮೀಸಲಿಟ್ಟಿದ್ದಾರೆ. ಅದು ಬಹುಶಃ detailed project report (DPR) ರೆಡಿಯಾಗಿ TAC meeting ನಲ್ಲಿ ಕೂಡ ಅಪ್ರೂವಲ್ ಆಗಿ ಅದು ಜಾರಿಗೆ ಬರಬೇಕಾದ ಹಿನ್ನೆಲೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಸುಮಾರು 32,500 ಹೆಕ್ಟೇರ್ ಪ್ರದೇಶಕ್ಕೆ ನೀರು ಬರುವಂಥ ಈ ಯೋಜನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮೇಲೆ ಉತ್ತರ ಕೊಡುವಾಗ ಆದನ್ನು ಘೋಷಣೆ ಮಾಡುತ್ತಾರೆಂದು ನಾನು ನಿರೀಕ್ಷೆ ಮಾಡುತ್ತೇನೆ. ಅದನ್ನು ತಕ್ಷಣ ಜಾರಿಗೆ ತಂದು ಟೆಂಡರ್ ಕರೆದು ಅಲ್ಲಿ 32,500 ಹೆಕ್ಟೇರ್ ಪ್ರದೇಶಗಳಲ್ಲಿ ಎಂದೂ ನೀರು ಕಾಣದಂಥ, ಉದ್ಯೋಗಕ್ಕಾಗಿ ಬೇರೆ ಬೇರೆ ರಾಜ್ಯದ ಕಡೆಗೆ ಗುಳೆ ಹೋಗುವಂಥ, ಆ ರೈತರಿಗೆ ಇವತ್ತು ಶಾಶ್ವತವಾದಂಥ ನೀರಾವರಿ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ಆ ಯೋಜನೆಯನ್ನು ಜಾರಿಗೊಳಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಬಹುಶಃ ಇವತ್ತು ಸಣ್ಣ ನೀರಾವರಿ ಇಲಾಖೆ ಮೂಲಕ ದೊಡ್ಡ ನೀರಾವರಿ ಇಲಾಖೆ ಮೂಲಕ ರೈತರಿಗೆ, ಸಾಮಾನ್ಯ ಬಡವರಿಗೆ, ಸಣ್ಣ ಸಣ್ಣ ರೈತರಿಗೆ ನೀರು ಕೊಡುವಂಥ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಿದೆ ಎಂದು ನಮಗೆ ಬಹಳ ಸಂತೋಷವಾಗುತ್ತದೆ. ಸಣ್ಣ ನೀರಾವರಿ ಇಲಾಖೆ ಮೂಲಕ ಸುಮಾರು 3,084 ಕೋಟಿ ರೂಪಾಯಿಗಳನ್ನು ಮೀಸಲಿಟ್ಟು ಯಾರು ಸಣ್ಣ ಸಣ್ಣ ದಲಿತ ರೈತರು, ಸಾಮಾನ್ಯ ರೈತರು marginal ರೈತರು ಇದ್ದಾರೆ, ಅಂಥವರಿಗೆ ಬೋರ್‌ವೆಲ್ ಮೂಲಕ ಅಥವಾ ಹೊಳೆಯಿಂದ, ಹಳ್ಳದಿಂದ ಬೇರೆ ನೀರಿನ ಲಿಫ್ಟ್ ಇರಿಗೇಷನ್ ಏತ ನೀರಾವರಿ ಮಾಡಿ ಸಣ್ಣ ಸಣ್ಣ ರೈತರ ಜಮೀನಿಗೆ ನೀರು ಕೊಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆನ್ನುವ ತೀರ್ಮಾನ ತೆಗೆದುಕೊಂಡು ಸಣ್ಣ ನೀರಾವರಿ ಇಲಾಖೆ ಮೂಲಕ ಒಂದು ಕ್ರಾಂತಿಕಾರಕ ಕಾರ್ಯಕ್ರಮವನ್ನು ಜಾರಿಗೊಳಿಸುತ್ತಿರುವ ಬಗ್ಗೆ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಈ ದೊಡ್ಡ ನೀರಾವರಿಗೂ ಕೂಡ ಈ ಸಂದರ್ಭದಲ್ಲಿ ಸಣ್ಣ ನೀರಾವರಿ ಇಲಾಖೆ ಮೂಲಕ ಸುಮಾರು 1,89,000 ಎಕರೆ ಜಮೀನಿಗೆ ನೀರಾವರಿ ಮಾಡುವಂಥ ಒಂದು ಯೋಜನೆ ಇದೆ. ಯಾವ ಹಳೆಯ ಕೆರೆಗಳಿವೆ,

ಬ್ರಿಟಿಷ್ ಕಾಲದಲ್ಲಿ, ಹಿರಿಯರು ನಿರ್ಮಿಸಿರುವ ಆ ಬಹಳಷ್ಟು ಕೆರೆಗಳ ಜೀರ್ಣೋದ್ಧಾರವಾಗಬೇಕಾಗಿದೆ, ಹೂಳು ತೆಗೆಯಬೇಕಾಗಿದೆ. ಅವುಗಳಲ್ಲಿ ಸ್ವಾಭಾವಿಕವಾಗಿ ಮಳೆ ನೀರು ಸಂಗ್ರಹವಾಗಬೇಕೆನ್ನುವ ಹಿನ್ನಲೆಯಲ್ಲಿ ಕೆರೆಗಳ ದುರಸ್ತಿ, ಜೀರ್ಣೋದ್ಧಾರ ಮುಂತಾದವುಗಳ ಮೂಲಕ ಸಾಕಷ್ಟು ಅಭಿವೃದ್ಧಿಯನ್ನು ಮಾಡಬೇಕು, ನೀರಿನ ಒಂದು ವ್ಯವಸ್ಥೆಯನ್ನು ಮಾಡಬೇಕು ಸರ್ಕಾರ ತೀರ್ಮಾನ ತೆಗೆದುಕೊಂಡಿದ್ದು ಈ ಬಜೆಟ್‌ನಲ್ಲಿ ಉಲ್ಲೇಖ ಮಾಡಿರುವುದರಿಂದ ಸರ್ಕಾರಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಒಂದು ಕಡೆ ಬರ, ಒಂದು ಕಡೆ ನೀರು ಇಲ್ಲ, ಕುಡಿಯುವ ನೀರಿಗೆ ಸಮಸ್ಯೆಯಾದಾಗ ಇನ್ನೊಂದು ಕಡೆಗೆ ಯಾವ್ಯಾವ ಹೊಳೆ ದಂಡೆ ಮೇಲೆ ನೀರು ಇದೆ, ಆ ನೀರಿನ ಸದುಪಯೋಗ ರೈತರಿಗೆ ಗೊತ್ತಿಲ್ಲದೆ ಬಹಳ ದೊಡ್ಡ ಪ್ರಮಾಣದಲ್ಲಿ ಕಬ್ಬನ್ನು ಬೆಳೆಯಲಿಕ್ಕೆ ಹೋಗಿ ಜಮೀನು ಸವಳು ಜೌಳು ಬಹಳ ಆಗಿದೆ. ಇಡೀ ರಾಜ್ಯದಲ್ಲಿ ಬೇರೆ ಬೇರೆ ಯೋಜನೆಗಳ ಮೂಲಕ ಲಕ್ಷಾಂತರ ಹೆಕ್ಟೇರ್ ಪ್ರದೇಶ ಇವತ್ತು ಸವಳು ಜೌಳಾಗಿ ತನ್ನ ಫಲವತ್ತತೆಯನ್ನು ಕಳೆದುಕೊಂಡು ಸ್ವಾಭಾವಿಕವಾಗಿ ಇದರಲ್ಲಿ ಯಾವುದೇ ರೀತಿಯ ಕೃಷಿ ಉತ್ಪನ್ನ ಬರುತ್ತಿಲ್ಲ. ಈ ವರ್ಷದ ಕೃಷಿ ಬಜೆಟ್‌ನಲ್ಲಿ ಸರ್ಕಾರ ಸುಮಾರು 30 ಕೋಟಿ ರೂಪಾಯಿಗಳನ್ನು ಮೀಸಲಿಟ್ಟು 72,000 ಎಕರೆ ಪ್ರದೇಶ ಸವಳು ಜೌಳಿನಿಂದ ಬಾಧಿತವಾಗಿದೆ, ಒಂದು ವಿಶೇಶವಾದ ವ್ಯವಸ್ಥೆಯನ್ನು ಮಾಡಿ ಫಲವತ್ತತೆಯನ್ನು ಪುನಃ ಆ ಜಮೀನಿಗೆ ಕೊಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡು ಒಂದು ಕಾರ್ಯಕ್ರಮ ಮಾಡುತ್ತಿದ್ದಾರೆ, ಇದು ಬಹಳ ಸ್ವಾಗತಾರ್ಹವಾದುದು. ಸೌರಶಕ್ತಿ ಪಂಪ್‌ಗಳ ಅಗತ್ಯದ ಹಿನ್ನಲೆಯಲ್ಲಿ ಅದರ ಬಗ್ಗೆ ಕೂಡ ಉಲ್ಲೇಖ ಮಾಡಿ ಆ ಬಜೆಟ್‌ನಲ್ಲಿ ಸೌರಶಕ್ತಿ ಪಂಪ್‌ಗಳನ್ನು ಅಳವಡಿಸುವಂಥ ಪ್ರಯತ್ನ ಯಾವ ರೀತಿ ಗುಜರಾತ್ ಸರ್ಕಾರದ ಸನ್ಮಾನ್ಯ ನರೇಂದ್ರ ಮೋದಿಯವರು ಸೌರಶಕ್ತಿಯನ್ನು ಸಂಪೂರ್ಣ ಉಪಯೋಗ ಮಾಡಿಕೊಂಡಿದ್ದಾರೋ ಅದೇ ತರಹ ಕರ್ನಾಟಕದಲ್ಲಿಯೂ ಮಾಡಬೇಕೆಂದು ಒಂದು ಇಚ್ಛಾಶಕ್ತಿಯನ್ನು ಸರ್ಕಾರ ಇಲ್ಲಿ ಪ್ರದರ್ಶನ ಮಾಡಿ ಆ ಬಜೆಟ್ ಮೂಲಕ ಅದನ್ನು ಜಾರಿಗೆ ತರಲಿಕ್ಕೆ ಹೊರಟಿದ್ದಾರೆನ್ನುವುದು ಬಹಳ ಒಳ್ಳೆಯ ಯೋಜನೆ ಎಂದು ಹೇಳಬಯಸುತ್ತೇನೆ. ಬಹುಶಃ ಕೃಷಿಗೆ ಉಚಿತವಾದ ವಿದ್ಯುತ್ ಅನ್ನು ಕೊಡುವಂಥ ಪ್ರಯತ್ನ ಸರ್ಕಾರ ಹಿಂದಿನ ವರ್ಷ ಮಾಡಿದೆ. ಅದನ್ನು ಈ ವರ್ಷವೂ ಕೂಡ ಮುಂದುವರೆಸಿಕೊಂಡು ಹೋಗಿರುವುದು ನನಗೆ ಒಳ್ಳೆಯ ಯೋಜನೆ ಎಂದೆನಿಸುತ್ತದೆ. ಬಹುಶಃ ದೇಶ, ರಾಜ್ಯಕ್ಕೆ ಬೇಕಾದಂಥ ಆಹಾರ ಉತ್ಪನ್ನ ಮಾಡುವಂಥ ರೈತರ ಕಷ್ಟಸುಖಗಳಿಗೆ ಸರ್ಕಾರ ಸ್ಪಂದನೆ ಮಾಡಿದಾಗ

ಮಾತ್ರ ನಾವು ಉದ್ಧಾರವಾಗುತ್ತೇವೆ, ಈ ರಾಜ್ಯ ಉದ್ಧಾರವಾಗುತ್ತದೆ. ಅಭಿವೃದ್ಧಿಯಲ್ಲಿ ಮುಂದೆ ಹೋಗುತ್ತೇವೆ. ದೇಶದ ಬೆನ್ನೆಲುಬು ಆದ ರೈತರನ್ನು ಮರೆತರೆ ಯಾವುದೇ ಅಭಿವೃದ್ಧಿ ಮಾಡಲಿಕ್ಕೆ ಆಗುವುದಿಲ್ಲ. ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಬೆಳೆಯುವಂಥ ದ್ರಾಕ್ಷಿಯನ್ನು ಒಣದ್ರಾಕ್ಷಿ ಮಾಡಿಕೊಂಡು ದೊಡ್ಡ ಪ್ರಮಾಣದಲ್ಲಿ ಬಿಜಾಪುರದಲ್ಲಿ ಇವತ್ತು ದ್ರಾಕ್ಷಿ ಬೆಳೆಯುವಂಥ ಕೃಷಿಕರಿದ್ದಾರೆ. ಅಲ್ಲಿರುವ ಫಲವತ್ತಾದ ಭೂಮಿ ಹಾಗೂ ಸಿಕ್ಕಿರುವಂತಹ ಸ್ವಲ್ಪ ನೀರನ್ನು ಹನಿ ನೀರಾವರಿ ಮಾಡುವ ಮೂಲಕ ಇಡೀ ಜಗತ್ತಿನಲ್ಲಿ ಬೇಡಿಕೆಯಿರುವಂತಹ ಅತ್ಯಂತ ಯೋಗ್ಯವಾದ ದ್ರಾಕ್ಷಿಯನ್ನು ಅಲ್ಲಿನ ರೈತರು ಬೆಳೆಯುತ್ತಾರೆ. ಒಂದು ಸಮಸ್ಯೆಯೆಂದರೆ ಬೆಳೆದಿರುವಂತಹ ದ್ರಾಕ್ಷಿಗೆ ನಿರೀಲ್ಲ ಮತ್ತು ರೋಗ-ರುಜಿನ ಬಂದು ಅಲ್ಲಿನ ರೈತರು ತುಂಬಾ ಸಂಕಷ್ಟದಲ್ಲಿದ್ದಾರೆ. ಅವರ ಸಹಾಯಕ್ಕೂ ಕೂಡ ಒಂದು ವಿಶೇಷ ಯೋಜನೆಯನ್ನು ಮಾಡಬೇಕೆಂದರೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬೇಕೆನ್ನುವ ಚಿಂತನೆ ಈಗಾಗಲೇ ಆಗಿದೆ. ಮಾನ್ಯ ತೋಟಗಾರಿಕೆ ಇಲಾಖೆಯ ಸಚಿವರು ಜಿಲ್ಲೆಗೆ ಬಂದಿದ್ದಾಗ ಸಾರ್ವಜನಿಕವಾಗಿ ರೈತರಿಗೆ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಬಿಜಾಪುರದ ಸುತ್ತಮುತ್ತ ಪ್ರದೇಶದಲ್ಲಿ ಬೆಳೆಯುವ ಒಣದ್ರಾಕ್ಷಿಯ ಮಾರಾಟಕ್ಕೆ ಒಂದು ಮಾರುಕಟ್ಟೆ ಬೇಕೆಂಬ ಬೇಡಿಕೆ ಹಲವಾರು ದಿವಸಗಳಿಂದ ಇದೆ. ಇದನ್ನು ಬಜೆಟ್‌ನಲ್ಲಿ ಘೋಷಣೆ ಮಾಡಿ ಬಿಜಾಪುರದಲ್ಲಿ ಒಂದು ಮಾರುಕಟ್ಟೆಯನ್ನು ಮಾಡುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದಾರೆ. ಸುಮಾರು 10,000 ಟನ್‌ನಷ್ಟು ಒಣದ್ರಾಕ್ಷಿಯನ್ನು ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದಾರೆಂಬ ವಿಷಯವನ್ನು ನಾವು ಸ್ವಾಗತ ಮಾಡುತ್ತೇವೆ. ದ್ರಾಕ್ಷಿ ಬೆಳೆಗಾರರಿಗಿರುವ ತೊಂದರೆಯೆಂದರೆ ಮೊದಲು 16% ಒಣದ್ರಾಕ್ಷಿ ಮಾರಾಟದ ಮೇಲೆ ತೆರಿಗೆಯಿತ್ತು. ಅದನ್ನು ನಮ್ಮ ಸರ್ಕಾರ ರೈತರ ಒತ್ತಾಯದ ಮೇರೆಗೆ ಕಡಿಮೆ ಮಾಡಿ ಇವತ್ತು 2% ಟ್ಯಾಕ್ಸ್ ಮಾತ್ರ ವಿಧಿಸುತ್ತಿದೆ. ಬಿಜಾಪುರದ ಜಿಲ್ಲೆಯ ಸಮೀಪಕ್ಕೆ ಹೊಂದಿಕೊಂಡಿರುವಂತಹ ಮಹಾರಾಷ್ಟ್ರದ ಸಾಂಗ್ಲಿಯಿರಬಹುದು, ಸೊಲ್ಲಾಪುರ ಜಿಲ್ಲೆಯಿರಬಹುದು, ಅಲ್ಲಿ ಮಹಾರಾಷ್ಟ್ರ ಸರ್ಕಾರ ಇದಕ್ಕೆ ಒಂದು ಪೈಸೆಯನ್ನು ಕೂಡ ಟ್ಯಾಕ್ಸ್ ಹಾಕುವುದಿಲ್ಲ. ಬಿಜಾಪುರ ಜಿಲ್ಲೆ, ಬಾಗಲಕೋಟೆ ಜಿಲ್ಲೆ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಬೆಳೆಯುವ ಒಣದ್ರಾಕ್ಷಿಯನ್ನು ರೈತರು ಮಹಾರಾಷ್ಟ್ರಕ್ಕೆ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ. 16% ಇದ್ದ ಟ್ಯಾಕ್ಸ್ ಅನ್ನು 2%ಗೆ ಇಳಿಸಿರುವ ಸರ್ಕಾರ ದಯಮಾಡಿ ಇದನ್ನೂ ಕೂಡ ತೆಗೆದುಹಾಕಿದರೆ ಒಳ್ಳೆಯದು. ಹಾಗೂ ಬಿಜಾಪುರದಲ್ಲಿ ಮಾರುಕಟ್ಟೆಯನ್ನು ಮಾಡಬೇಕೆಂಬ ತೀರ್ಮಾನವನ್ನು ಏನು ತೆಗೆದುಕೊಂಡಿದೆ, ಅದು ಸಂಪೂರ್ಣ